ಕರ್ನಾಟಕ ವಿಧಾನ ಸಭೆ

ಗುರುವಾರ 31ನೇ ಡಿಸೆಂಬರ್ 1992 ಪುಷ್ಯ ೧೦, ೧೯೧೪ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11–10 ಗಂಟೆಗೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರು: (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದರು.)

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪಹಣಿ ಪತ್ರಿಕೆಗಳಿಂದ ಪೊಕಳೆ ದಾಖಲೆಗಳನ್ನು ಕಡಿಮೆ ಮಾಡುವ ಬಗ್ಗೆ

350. ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೇರೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಂದಾಯ ಇಲಾಖೆಯ ಪಹಣಿ ಪತ್ರಗಳಲ್ಲಿ (ಆರ್.ಎಫ್.ಆರ್.) ಪೊಕಳೆ ಮತ್ತು ನಕಲಿ ಹಳೆಯ ದಾಖಲೆಗಳಿಂದ ರೈತರು ಸಾಲ ಪಡೆಯಲು ಹಾಗೂ ಜಮೀನಿನ ವಿಲೇವಾರಿ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಪೊಕಳೆ ಮತ್ತು ನಕಲಿ ಹಳೆಯ ದಾಖಲೆಗಳನ್ನು ಹಕ್ಕು ಪತ್ರಗಳಿಂದ ಕಡಿಮೆ ಮಾಡಲು ಸರ್ಕಾರ ಯೋಜಿಸಿದೆಯೆ ?

ಇ) ಆ ಬಗ್ಗೆ ಈವರೆಗೆ ಜರುಗಿಸಿದ ಮತ್ತು ಜರುಗಿಸಲಿರುವ ಕ್ರಮಗಳೇನು ಹಾಗೂ ಸರ್ಕಾರದವರ ನಿಲುವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ) ಹೌದು.

ಆ) ಇವುಗಳನ್ನು ಸರಿಪಡಿಸಲು ಈಗಾಗಲೇ ತಹಶೀಲ್ದಾರ್‌ರವರಿಗೆ ಸೂಚನೆ ನೀಡಲಾಗಿದೆ.

ಇ) ಈಗಾಗಲೇ ತಹಶೀಲ್ದಾರ್‌ರವರಿಗೆ ಸೂಚನೆ ನೀಡಲಾಗಿದೆ ಮತ್ತು ಅವುಗಳನ್ನು ಅತಿ ಜರೂರಾಗಿ ಸರಿಪಡಿಸಲು ಮತ್ತು ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನೀಗಿಸಲು ಮತ್ತೊಮ್ಮೆ ನಿರ್ದೇಶನ ನೀಡಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಎಚ್. ಬನ್ನಿಕೋಡ್:– ಮಾನ್ಯ ಉಪಾಧ್ಯಕ್ಷಿಣಿಯವರೇ,ಈ ಪ್ರಶ್ನೆ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಪೊಕಳೆ ಎಂಟ್ರಿ ಬಗ್ಗೆ ಇದ್ದು, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ಗಮನಿಸಿದರೆ ಇಂಥ ಪೊಕಳೆ ಎಂಟ್ರಿಗಳನ್ನು ಕಡಿಮೆ ಮಾಡುವುದಕ್ಕೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದಾರೆ ಎಂದು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ನನಗೆ ತಿಳಿದ ಪ್ರಕಾರ ರೆವಿನ್ಯೂ ಇಲಾಖೆಯಲ್ಲಿ ಹಕ್ಕು ಪತ್ರ ಅಥವಾ ಪಹಣಿ ಪತ್ರಿಕೆಯಲ್ಲಿ ಇರತಕ್ಕಂಥ ಪೊಕಳೆ ಎಂಟ್ರಿಗಳಿಂದ ರೈತರಿಗೆ ಸಾಲ ಪಡೆಯುವುದಕ್ಕೆ ಮತ್ತು ನೀರಾವರಿ ಉಪಯೋಗ ಮಾಡುವುದಕ್ಕೆ, ತಮ್ಮ ಆಸ್ತಿಯನ್ನು ಬೇರೆಯವರಿಗೆ ಹಸ್ತಾಂತರ ಮಾಡುವುದಕ್ಕೆ ಅನೇಕ ತೊಂದರೆಗಳು ಈ ರಾಜ್ಯದಲ್ಲಿ ಆಗಿವೆ. ಇದಕ್ಕೆ ಮೊದಲು ನಮ್ಮ ಸರ್ಕಾರ ಇದ್ದಾಗ, ಮಾನ್ಯ ಬೊಮ್ಮಾಯಿಯವರು ಕಂದಾಯ ಸಚಿವರು ಇದ್ದಾಗ,

ಇಂತಹ ಪೊಕಳೆ ಎಂಟ್ರಿಗಳನ್ನು ಆದು ಒತ್ತೆ ಇರಬಹುದು ಅಥವಾ ರೈತ ಎಂಟ್ರಿ ಇರಬಹುದು, ಅವುಗಳನ್ನು ಪೊಕಳೆ ಎಂಟ್ರೀಸ್ ಅಂತ ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟು ಅವಕಾಶ ಕೊಟ್ಟು ಕಡಿಮೆ ಮಾಡುವುದಕ್ಕೆ ಸರ್ಕಾರದ ಆದೇಶ ಇತ್ತು. ನಂತರ ಬಂದಂಥ ಸರ್ಕಾರ ಈ ಆದೇಶವನ್ನು ವಾಪಸ್ಸು ತೆಗೆದುಕೊಂಡಿದೆ. ಹಳ್ಳಿಗಳಲ್ಲಿ ಶ್ರೀಮಂತರಿದ್ದವರು ಹೇಗೋ ಸರಿಪಡಿಸಿಕೊಳ್ಳುತ್ತಾರೆ. ಆದರೆ ಬಡವರು, ಅಲ್ಪಸಂಖ್ಯಾತರು, ಹಿಂದುಳಿದವರು, ಹರಿಜನ–ಗಿರಿಜನರು, ಸಣ್ಣ ಹಿಡುವಳಿದಾರರು ಇವರುಗಳಿಗೆ ಈಗ ಅತೀವ ತೊಂದರೆಯಾಗಿದೆ. ಈ ಎಂಟ್ರಿಗಳನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಅಧಿಕಾರಿಗಳು ಇದ್ದಾರೆ. ಅದಕ್ಕಾಗಿ ಈ ಎಲ್ಲಾ ರೈತರ ಎಂಟ್ರಿಗಳನ್ನು ಪಹಣಿ ಪತ್ರಿಕೆಗಳಲ್ಲಿ ಇರುವುದನ್ನು ಅಥವಾ ಒತ್ತೆಯಿಡುವ ಎಂಟ್ರಿಗಳು, ನೂರಾರು ವರ್ಷಗಳಿಂದ ಇವೆ, ಇನ್ನೂರು ರೂಪಾಯಿಗೆ ಒತ್ತೆಬೋಜ ಅಂತ ಇದೆ. ಎಲ್ಲಿ ಹೋದರೂ ಸಾಲ ಸಿಗುವುದಿಲ್ಲ ಮತ್ತು ರೈತರಿಗೆ ಇಡೀ ರಾಜ್ಯದಲ್ಲಿ ಇದರಿಂದ ತೊಂದರೆಯಾಗಿದೆ. ಮಾನ್ಯ ಸಚಿವರು ಇದನ್ನು ಗಮನಿಸಿ ಈಗ ಇರತಕ್ಕಂಥ ಸುತ್ತೋಲೆಯಿಂದ ರೈತರಿಗೆ ಪರಿಹಾರ ಸಿಗುವುದಿಲ್ಲ. ಸವಿಸ್ತಾರವಾಗಿ ಈ ಕ್ರಮವನ್ನು ತಾವು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯಶ್ರೀ ಬನ್ನಿಕೋಡ್ ಅವರು ಏನು ಪ್ರಶ್ನೆ ಕೇಳಿದ್ದಾರೆ, ಇದು ಬಹಳ ಮುಖ್ಯವಾದದ್ದು. ರೈತರು ತಮ್ಮ ಜಮೀನನ್ನು ಮಾರಾಟ ಮಾಡಬೇಕಾದರೆ ಆಗಲಿ, ಅಥವಾ ಸಾಲ ತೆಗೆದುಕೊಳ್ಳಬೇಕಾದರೆ ಆಗಲಿ ರೆಕಾರ್ಡ್ ಆಫ್ ರೈಟ್ ಅಪ್‌ಟುಡೇಟ್ ಆಗಿ ಇರಬೇಕಾದದ್ದು ಅನಿವಾರ್ಯ. ಅನೇಕ ಸಂದರ್ಭಗಳಲ್ಲಿ ಅವು ಆಗಿಲ್ಲ. ಇದು ಆಗಬೇಕು ಎಂದು ಸರ್ಕಾರ ಒಂದು ಸುತ್ತೋಲೆಯನ್ನು ಕೊಟ್ಟಿದ್ದು ಕೆಲವು ಕಡೆ ಆಗಿದೆ, ಇನ್ನೂ ಕೆಲವು ಕಡೆ ಆಗಿಲ್ಲ. ಅದಕ್ಕೋಸ್ಕರ ಒಂದು ಸ್ಪೆಶಲ್ ಡ್ರೈವ್ ಅಂತ ಮಾಡಿ ಆದಷ್ಟು ಜಾಗ್ರತೆ ಇದನ್ನು ಅಪ್‌ಟುಡೇಟ್ ಮಾಡುವುದಕ್ಕೆ ನಾನು ಪ್ರಯತ್ನಪಡುತ್ತೇನೆ. ಹಿಂದೆ ಒಂದು ಆದೇಶವನ್ನು ಕೊಟ್ಟಿದ್ದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ ಅಂತ ಅವರು ಏನು ಸಲಹೆ ಕೊಟ್ಟಿದ್ದಾರೆ ಆ ಆದೇಶ ಏನು ಎಂದು ನೋಡಿ ಅದರಿಂದ ಅನುಕೂಲ ಆಗಿದ್ದರೆ ಮತ್ತೆ ಜಾರಿ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಕಂದಾಯ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ, ಬಹಳ ಸಂತೋಷ. ಆದರೆ, ಅವರ ಗಮನಕ್ಕೆ ಬಂದಿರಬಹುದು, ವಿಲೇಜ್ ಅಕೌಂಟೆಂಟುಗಳು ಚಾವಡಿಯಲ್ಲಿ ಕುಳಿತು ಪಹಣಿ ಕಾಲಂನಲ್ಲಿ ಎಂಟ್ರಿ ಮಾಡುತ್ತಾರೆ. ಇದರಿಂದ ವ್ಯಾಜ್ಯಗಳೂ ನಡೆದಿವೆ, ರೈತರು ಸಾಕಷ್ಟು ಕಷ್ಟದಲ್ಲಿ ಬಂದಿದ್ದಾರೆ. ಹಾಗಾಗಿ, ಯಾವುದೇ ಎಂಟ್ರಿಯನ್ನು ಪಹಣಿಯಲ್ಲಿ ಅಥವಾ ಆದರ್ಸ್ ರೈಟ್ಸ್ ಕಾಲಂನಲ್ಲಿ ಹಾಗೂ ಓನರ್‌ಷಿಪ್ ಕಾಲಂನಲ್ಲಿ ಎಂಟ್ರಿ ಮಾಡಬೇಕಾದರೆ, ಮಿಟೇಷನ್ ಆಗಲೇಬೇಕು. ಎನ್‌ಕ್ವೈರಿ ಮಾಡದೇ, ಎಂಟ್ರಿ ಮಾಡುವುದಕ್ಕೆ ಬರುವುದಿಲ್ಲ. ಇದನ್ನೂ ಅಲ್ಲಿಯೇ ಮಾಡುತ್ತಿದ್ದಾರೆ. ಹಾಗಾಗಿ, ಆದು ಓನರ್‌ಷಿಪ್ ಕಾಲಂ ಇರಬಹುದು ಅಥವಾ ಆದರ್ಸ್ ರೈಟ್ಸ್ ಕಾಲಂ ಇರಬಹುದು ಮತ್ತು ಪಹಣಿ ಕಾಲಂ ಇರಬಹುದು, ಎನ್‌ಕ್ವೈರಿ ಮಾಡದೇ ಯಾವುದೇ ಪಹಣಿ ಆಗಬಾರದೆಂದು ತಾವು ಆದೇಶ ಕೊಡುತ್ತೀರಾ ? ಎರಡನೆಯದು ಭೂ ಸುಧಾರಣಾ ಕಾನೂನು ಸೆಕ್ಷನ್ 48ರ ಪ್ರಕಾರ, ರೈತರು 7ನೇ ಫಾರಂನಲ್ಲಿ ಅರ್ಜಿ ಹಾಕಬೇಕಾಗುತ್ತದೆ. Ordinary tenants ಇರಬಹುದು. ಹಾಗಾಗಿ ಅವರ ಹೆಸರಿನಲ್ಲಿಯೇ ಪಹಣಿ ಇದೆ. ಆದರೆ ಓನರ್‌ಷಿಪ್‌ನಲ್ಲಿ ಗವರ್ನಮೆಂಟ್ ಲೆಕ್ಕದಲ್ಲಿ ಅವರು ಓನರ್ ಆಗಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ಇದರ ಬಗ್ಗೆ ತಾವು ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಪಹಣಿ ಕಾಲಂ ನಂ.9 ರಲ್ಲಿ ಮಾಲಿಕರು ಯಾರು ಎಂದು ಹೇಳಬೇಕಾಗುತ್ತದೆ. ಕಾಲಂ ನಂ.11ರಲ್ಲಿ ಲಿಮಿಟೆಡ್ ರೈಟ್ಸ್ ಎಂದು ಬರುತ್ತದೆ. ಇದರ ಕೆಳಗಡೆ

ಯಾವಯಾವುದು ಬರುತ್ತದೆಂದರೆ, Mortgage, easement rights, life interest, right over trees or paths etc., ಇವೆಲ್ಲಾ ಕಾಲಂ ನಂ.11ರಲ್ಲಿ ಬರುತ್ತವೆ. ಇದು ಇವತ್ತು ಲಿಮಿಟೆಡ್ ರೈಟ್ಸ್, ಇದು ಅಪ್ ಟು ಡೇಟ್ ಆಗಬೇಕು. ಅಪ್ ಟು ಡೇಟ್ ಆಗುವುದಕ್ಕೆ ಒಂದು ಸ್ಪೆಷಲ್ ಡ್ರೈವ್ ಮಾಡುತ್ತೇನೆ. ಸ್ಪೆಷಲ್ ಡ್ರೈವ್ ಮಾಡಿ, ಅವರ ಮೊದಲನೆಯ ಪ್ರಶ್ನೆಗನುಸಾರವಾಗಿ, ಡ್ರೈವ್ ಮಾಡುವಂಥ ಕಾಲದಲ್ಲಿ ಸಂಬಂಧಪಟ್ಟವರು ಯಾರು ಯಾರು ಇದ್ದಾರೆ. ಅವರಿಗೆಲ್ಲರಿಗೂ ನೋಟೀಸ್ ಕೊಡಬೇಕೆಂದು ಹೇಳಿದ್ದೇನೆ. ಈ ರೀತಿ ನೋಟೀಸ್ ಕೊಡಬೇಕಾದದ್ದು ಅನಿವಾರ್ಯ. ಅವರಿಗೆಲ್ಲರಿಗೂ ನೋಟೀಸ್ ಕೊಟ್ಟು, ಅವರನ್ನು ಕರೆಯಿಸಿ, ಅಬ್ಜಕ್ಷನ್ಸ್ ಕ್ಲಿಯರ್ ಮಾಡಿ, ಟೈಟಲ್‌ಗಳನ್ನು ಕ್ಲಿಯರ್ ಮಾಡಿ, ಎಂಟ್ರಿ ಅಪ್ ಟು ಡೇಟ್ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಸಚಿವರು ಲೋಪದೋಷಗಳನ್ನು ಸರಿಪಡಿಸುತ್ತೇವೆಂದು ಹೇಳಿದ್ದಾರೆ. ಧನ್ಯವಾದಗಳು. ತಮಗೆ ಗೊತ್ತಿರುವ ಹಾಗೆ, ರೈತರು ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗಲಿ ಎಂದು, ಎಲ್ಲಾ ವಿವರಗಳನ್ನೊಳಗೊಂಡಂತೆ, (ಪಹಣಿ ಹತ್ತಿರವೂ ಹೋಗಬೇಕಾಗಿಲ್ಲ) ಸರಿಯಾದ ಒಂದು ಪಾಸ್ ಪುಸ್ತಕದ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು. ಸರ್ಕಾರ ಈ ವಿಚಾರವಾಗಿ ಆಶ್ವಾಸನೆ ಕೊಟ್ಟಿದೆ. ಆದರೆ ಈ ರೀತಿಯ ಪಾಸ್ ಪುಸ್ತಕಗಳನ್ನು ಕೆಲವರಿಗೆ ಕೊಟ್ಟಿದ್ದೀರಿ. ಮತ್ತೆ ಕೆಲವರಿಗೆ ಕೊಟ್ಟಿಲ್ಲ. ದಯಮಾಡಿ ತಮ್ಮ ಕಾಲದಲ್ಲಾದರೂ ಸಹ ಎಲ್ಲಾ ವಿವರಗಳನ್ನು ಒಳಗೊಂಡ ಪಾಸ್ ಪುಸ್ತಕಗಳು ಸಿಕ್ಕಿದರೆ, ರೈತರು ಬ್ಯಾಂಕುಗಳಲ್ಲಿ, ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಈಗಾಗಲೇ ಎಷ್ಟು ಕೊಟ್ಟಿದ್ದೀರಿ; ದಯಮಾಡಿ ಇದರ ಬಗ್ಗೆ ಶೀಘ್ರವಾಗಿ, ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ:– ಪಾಸ್ ಪುಸ್ತಕಗಳನ್ನು ಈಗಾಗಲೇ ಕೆಲವರಿಗೆ ಕೊಡಲಾಗಿದೆ. ಇನ್ನು ಕೆಲವರಿಗೆ ಕೊಡಬೇಕಾದ್ದು ಇದೆ, ಆದಷ್ಟು ಜಾಗ್ರತೆ ಹಂಚಿಕೆ ಮಾಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅರ್ಜಿ ಹಾಕುವುದನ್ನು ಬಿಟ್ಟಿದ್ದಾರೆಂದು ಹೇಳಿದ್ದಾರೆ. ನಾನು ಹೇಳುವುದು ಅವರು ಹೇಳಿದ್ದಲ್ಲ. ಈಗ್ಗೆ 50–100 ವರ್ಷಗಳಿಂದ ಒಂದು ದಾಖಲೆ ಆಗಿದೆ, ಕಾನೂನು ಬದ್ಧವಾಗಿದೆಯೇ ಆಗಿದೆ, ಕಾನೂನು ಬಾಹಿರ ಎಂದು ಹೇಳುವುದಿಲ್ಲ. ಅದು ಅದರ್ಸ್ ರೈಟ್ಸ್ ಕಾಲಂನಲ್ಲಿದೆ ಅಥವಾ ಪಹಣಿಯಲ್ಲಿದೆ ಎಂಬುದಲ್ಲ. ಅವರು ಸತ್ತು ಕೆಟ್ಟು ಹೋಗಿದ್ದಾರೆ. ವಾರಸುದಾರರು ಯಾರೂ ಇಲ್ಲ. ಅರ್ಜಿ ಹಾಕುವವರು ಯಾರೂ ಇಲ್ಲ. ಇಂತಹ ಸಮಯದಲ್ಲಿ ಅವು ಹಾಗೆಯೇ ಉಳಿದಿವೆ. ಅದಕ್ಕಾಗಿ ಇವೆಲ್ಲವುಗಳನ್ನೂ ಸರಿಪಡಿಸುವುದಕ್ಕೆ, ಅವರಿಗೂ ಒಂದು ಅಪಾರ್ಚುನಿಟಿ ಕೊಟ್ಟೇ ಮಾಡಿ. ಅವರದು ಏನಾದರೂ ತಕರಾರು ಇದ್ದರೆ, ಹಕ್ಕು ಇದ್ದರೆ ಅಥವಾ ಬರತಕ್ಕಂಥ ಸಾಲ ಇದ್ದರೆ, ಅವರಿಗೆ ಅವಕಾಶ ಕೊಟ್ಟು ಸರಿಪಡಿಸಬೇಕು. ಎಲ್ಲಿ ಪೋಕಳೆ ಉಳಿದಿದೆ, ಇವತ್ತಿನ ಕಾನೂನಿನಲ್ಲಿ ಆಧಾರ ಇಲ್ಲದೇ ರೈತರಿಗೆ ತೊಂದರೆಯಾಗುತ್ತಿದೆ. ನಮ್ಮ ದೇಶದಲ್ಲಿ ಒಬ್ಬ ಮಹಿಳೆ, ಎರಡು ಎಕರೆ ಜಮೀನು ಇಟ್ಟುಕೊಂಡು, ಪಹಣಿಯಲ್ಲಿ ಯಾವುದೋ ಒಂದು ಎಂಟ್ರಿ 40 ವರ್ಷಗಳಿಂದ ಇದೆ. ಇತರೆ ಯಾವುದರಲ್ಲೂ ಇಲ್ಲ, ಅದರ್ಸ್ ರೈಟ್ಸ್‌ನಲ್ಲಿ ಮಿಟೇಷನ್ ಆಗಿಲ್ಲ. ಆಕೆ ಗಂಡನ ಕಾಲದಿಂದಲೂ ಹೆಸರು ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಗಂಡ ಸತ್ತು ಹೋಗಿದ್ದಾನೆ, ಇರತಕ್ಕ ಎರಡು ಎಕರೆಗೆ, ಲ್ಯಾಂಡ್ ರಿಫಾರ್ಮ್ಸ್ ಪ್ರಕಾರ ಫಾರಂ 7ರಲ್ಲಿ ಅರ್ಜಿಯನ್ನೂ ಕೊಟ್ಟಿಲ್ಲ. ಆ ಹೆಸರು ಇದ್ದವನು ಬಂದು ಹೊಲ ಹೊಡೆಯುತ್ತಿದ್ದಾನೆ. ಇದಕ್ಕೆ ಏನು ಮಾಡಬೇಕು ? ಇಲ್ಲಿಯವರೆಗೂ ಇದನ್ನು ಸರಿ ಮಾಡಿಲ್ಲ. ಈಗ್ಗೆ 50 ವರ್ಷಗಳಿಂದಲೂ ಮಾಡಿಲ್ಲ. ಎಂದೋ ಒಂದು ಎಂಟ್ರಿ ಬಂದಿದೆ, ಮಿಟೇಶನ್ ಸರ್ಟಿಫೈ ಆಗಿಲ್ಲ. ದಯಮಾಡಿ, ವಿಧವೆಯರು, ಬಡವರು ಹಾಗೂ

ಸಣ್ಣ ಹಿಡುವಳಿದಾರರ ಹಿತಕ್ಕೆ ತಾವು ಏನು ಮಾಡುತ್ತೀರಿ ? ಇದನ್ನು ಕೂಲಂಕಷವಾಗಿ ವಿಚಾರ ಮಾಡಿ, ಪರಿಹಾರ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI M. RAJASHEKHARA MURTHY: The suggestion of Hon. member is noted.

ಸಹಕಾರಿ ಕ್ಷೇತ್ರದಲ್ಲಿರುವ ಗಿರಣಿಗಳು ಹಾಗೂ ಕೈಗಾರಿಕೆಗಳು

456. ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಕಾರಿ ಸಂಸ್ಥೆಗಳಡಿಯಲ್ಲಿ ಬರುವ ಸಹಕಾರಿ ಹತ್ತಿ ನೂಲಿನ ಗಿರಣಿ, ಸಕ್ಕರೆ ಕಾರ್ಖಾನೆ, ಆಯಿಲ್ ಇಂಡಸ್ಟ್ರೀಸ್ (ಎಣ್ಣೆಕಾಳುಗಳ ಸಹಕಾರ ಸಂಘ) ಇವುಗಳನ್ನು ಮಂಜೂರು ಮಾಡಿದ ಸಂಖ್ಯೆಯೆಷ್ಟು, ಮತ್ತೆ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಆ) ವಿಶ್ವಬ್ಯಾಂಕಿನ ನೆರವಿನಿಂದ ಎನ್.ಸಿಡಿಸಿಗೆ ನಾಲ್ಕನೆ ಯೋಜನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಮಂಜೂರು ಆದ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ?

ಇ) ಈ ಯೋಜನೆಯಡಿಯಲ್ಲಿ ಮಂಜೂರಾದ ಕಾರ್ಖಾನೆಗಳ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ) ಸಹಕಾರಿ ಸಂಸ್ಥೆಗಳಡಿಯಲ್ಲಿ ಈ ಕೆಳಕಂಡ ನೂಲಿನ ಗಿರಣಿ, ಸಕ್ಕರೆ ಕಾರ್ಖಾನೆ ಮತ್ತು ಆಯಿಲ್ ಇಂಡಸ್ಟ್ರೀಸ್‌ಗಳನ್ನು ಮಂಜೂರು ಮಾಡಿದೆ.

1) ನೂಲಿನ ಗಿರಣಿ: 12 ಗಿರಣಿಗಳಿಗೆ ಮಂಜೂರಾತಿ ನೀಡಿದೆ. ಇದರಲ್ಲಿ 8 ನೂಲಿನ ಗಿರಣಿಗಳು ಪೂರ್ಣ ರೀತಿಯಲ್ಲಿ ಉತ್ಪಾದನೆ ಪ್ರಾರಂಭಿಸಿವೆ. ಮೂರು ನೂಲಿನ ಗಿರಣಿಗಳು ಭಾಗಶಃ ಉತ್ಪಾದನೆ ಪ್ರಾರಂಭಿಸಿವೆ. 1ನೂಲಿನ ಗಿರಣಿ ಪ್ರಾರಂಭಿಸಬೇಕಾಗಿದ್ದು ಮಾರ್ಚ್ 1993ರ ಒಳಗಾಗಿ ಪ್ರಾರಂಭಿಸುವ ನಿರೀಕ್ಷೆ ಇದೆ.

2) ಸಕ್ಕರೆ ಕಾರ್ಖಾನೆ: ಮಂಜೂರಾತಿ ನೀಡಿರುವುದು 17. ಇವುಗಳಲ್ಲಿ 16 ಕಾರ್ಖಾನೆಗಳು ಕಾರ್ಯಗತ ಮಾಡುತ್ತಿವೆ. 1 ಸಕ್ಕರೆ ಕಾರ್ಖಾನೆಯು ಸ್ಥಗಿತಗೊಂಡಿರುತ್ತದೆ.

3) ಆಯಿಲ್ ಇಂಡಸ್ಟ್ರೀಸ್: ಒಟ್ಟು ಇರುವುದು 336. ಈ ಪೈಕಿ 302 ಸಂಘಗಳು ಹಾಲಿ ಕಾರ್ಯ ನಿರ್ವಹಿಸುತ್ತಿದ್ದು 29 ಸಂಘಗಳು ಸ್ಥಗಿತಗೊಂಡಿರುತ್ತವೆ. 5 ಸಂಘಗಳನ್ನು ನವೆಂಬರ್ ತಿಂಗಳಲ್ಲಿ ನೋಂದಣಿ ಮಾಡಿರುವುದರಿಂದ ಅವುಗಳ ಕಾರ್ಯ ಜನವರಿ 1993ರಿಂದ ಪ್ರಾರಂಭಿಸಲಾಗುವುದು.

ಆ) ವಿಶ್ವ ಬ್ಯಾಂಕಿನ ನೆರವಿನಿಂದ ಎನ್.ಸಿಡಿಸಿಗೆ ನಾಲ್ಕನೇ ಯೋಜನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಇನ್ನೂ ಯಾವ ಸಹಕಾರಿ ನೂಲಿನ ಗಿರಣಿಗಳನ್ನು ಮಂಜೂರು ಮಾಡಿರುವುದಿಲ್ಲ. ರಾಜ್ಯ ಸರ್ಕಾರವು ಮೂರು ನೂಲಿನ ಗಿರಣಿಗಳನ್ನು ಎನ್.ಸಿ.ಡಿ.ಸಿ. ನಾಲ್ಕನೆ ಯೋಜನೆಯಲ್ಲಿ ಪ್ರಾರಂಭಿಸಲು ಪ್ರಸ್ತಾವನೆಗಳನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದವರಿಗೆ ಶಿಫಾರಸ್ಸು ಮಾಡಿ ಕಳುಹಿಸಿರುತ್ತಾರೆ.

ಇ) ಮೇಲಿನ (ಆ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಪಿ.ಸಿ. ಸಿದ್ದನಗೌಡರ್:– ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಹಕಾರ ಸಚಿವರು ಉತ್ತರ ಆಗಿದೆ ಎಂದು ಹೇಳಿದರು. ಕೋ ಆಪರೇಟೀವ್ ಸೆಕ್ಟರ್‌ನಲ್ಲಿ ಆಯಿಲ್ ಇಂಡಸ್ಟ್ರೀಸ್ ಆಗಲೀ,